ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು. ದಿನಾಂಕಃ 05.02.2025.

**ಪಾಟೀ ಸವಾಲುಃ** ವಾದಿ ಪರ ಶ್ರೀ ಪಿ.ಎನ್.ಎಸ್. ವಕೀಲರಿಂದಃ

ನನ್ನ ಪೂರ್ವಿಕರ ಹೆಸರು ಶಿವಣ್ಣ ತಂದೆ ಚಂದ್ರಶೇಖರ ಕಲಶೆಟ್ಟಿ ಇರುತ್ತಾರೆ ಎಂದರೆ ಸರಿ. ಅವರ ಹೆಂಡತಿಯ ಹೆಸರು ಚೋಳಮ್ಮ ಇರುತ್ತದೆ ಎಂದರೆ ಸರಿ. ಶಿವಣ್ಣ ರವರಿಗೆ ನಾಲ್ಕು ಗಂಡು ಮಕ್ಕಳು ಹಾಗೂ ಒಬ್ಬರು ಹೆಣ್ಣು ಮಗಳು ಇರುತ್ತಾರೆ ಎಂದರೆ ಸರಿ. ದತ್ತಾತ್ರಯನ ಹೆಂಡತಿಯ ಹೆಸರು ಗುರುಬಾಯಿ ಇರುತ್ತದೆ ಎಂದರೆ ಸರಿ. ಮಲ್ಲಮ್ಮ ರವರ ಅಂದರೆ ನನ್ನ ತಂಗಿ ಗಂಡನ ಹೆಸರು ಸೈದಪ್ಪ ಇರುತ್ತದೆ ಎಂದರೆ ಸರಿ. ನನಗೆ ರಾಜಶೇಖರ ಮತ್ತು ಸಂತೋಷಿ ಅಂದರೆ 2 ಮತ್ತು 3ನೇ ಪ್ರತಿವಾದಿಯರು ನನ್ನ ಮಕ್ಕಳು ಎಂದರೆ ಸರಿ. ಸೈದಪ್ಪ ರವರ ಮಗನ ಹೆಸರು ಅಮರನಾಥ ಎಂದರೆ ಸರಿ, ಅವರು ಈ ಕೇಸಿನ 9ನೇ ಪ್ರತಿವಾದಿ ಎಂದರೆ ಸರಿ. ವಾದಿ ಶಿವಲಿಗಂಪ್ಪ ನನಗೆ ತಮ್ಮನಾಗಬೇಕು.

ದಾವಾ 'ಎ' ಶೆಡ್ಯುಲ್‌ನಲ್ಲಿ ತೋರಿಸಿದ ಎಲ್ಲ ಸ್ವತ್ತುಗಳು ಮೂಲು ಪುರುಷ ಶಿವಣ್ಣನಿಗೆ ಸೇರಿದ್ದವು ಎಂದರೆ, ಸಾಕ್ಷಿ ಆ ಪೈಕಿ ಸರ್ವೆ ನಂ.68 ಸೇರಿರಲಿಲ್ಲ ಎಂದು ನುಡಿಯುತ್ತಾರೆ. ದಾವಾ 'ಎ' ಶೆಡ್ಯುಲ್ ಸ್ವತ್ತಿನಲ್ಲಿ ತೋರಿಸಿದ ಐಟಂ ನಂ.7 ಸರ್ವೆ ನಂ.282 ನಾನು ಖರೀದಿ ಹಿಡಿದಿದ್ದು ಇರುತ್ತದೆ. ಉಳಿದ ಜಮೀನುಗಳು ನಮಗೆ ಹಿರಿಯರಿಂದ ಬಂದಿರುತ್ತವೆ. ಹಿರಿಯರಿಂದ ಬಂದ ಜಮೀನುಗಳು ಕೆಲವೊಂದು ನೀರಾವರಿ ಜಮೀನುಗಳು ಇರುತ್ತವೆ ಎಂದರೆ ಸರಿ. ನಾವು ಹುಟ್ಟಿದಾಗಿನಿಂದ ಒಕ್ಕಲುತನವೇ ಮಾಡುತ್ತೇವೆ ಎಂದರೆ ಸರಿ. ನನ್ನ ತಂದೆ ಸರಿಹೋದ ನಂತರ ಮನೆಯ ಕಾರುಬಾರನ್ನು ನಾನೇ ಮಾಡುತ್ತಿದ್ದೆ ಎಂದರೆ, ಸಾಕ್ಷಿ ಜಮೀನು ಕಾರುಬಾರು ಮಾಡುತ್ತಿದ್ದೆ, ಆದರೆ ಮನೆಯ ಕಾರುಬಾರು ಮಾಡುತ್ತಿದ್ದಿಲ್ಲ ಎಂದು ನುಡಿಯುತ್ತಾರೆ. ನಮ್ಮ ಕುಟುಂಬಕ್ಕೆ ಜಮೀನಿನ ಉತ್ಪನ್ನ ಹೊರತುಪಡಿಸಿ ಬೇರೆ ಆಧಾಯ ಇರಲಿಲ್ಲ ಎಂದರೆ ಸರಿ. ನಾನು ಹಿರಿಯರಿಂದ ಬಂದ ಜಮೀನುಗಳ ಉತ್ಪನ್ನನಿಂದ ಐಟಂ ನಂ.7 ಜಮೀನು ಸರ್ವೆ ನಂ.282ನ್ನು ಖರೀದಿಸಿರುತ್ತೇನೆ ಎಂದರೆ ಸರಿ.

ತಂದೆ ತಿರಿಕೊಂಡ ನಂತರ ನಾಲ್ಕು ಜನ ಗಂಡು ಮಕ್ಕಳಿಗೆ ಹಾಗೂ ಒಬ್ಬ ಹೆಣ್ಣು ಮಗಳಿಗೆ ಸುಮಪಾಲು ಹಿಸ್ಸಾ ಇದೆ ಎಂದರೆ ಸರಿ. ಆ ಪ್ರಕಾರ ನ್ಯಾಯಾಲಯದವರು ಆದೇಶ ಮಾಡಿದರೆ ನನ್ನದು ಏನು ತಕರಾರು ಇರುವುದಿಲ್ಲ. ಸೈದಪ್ಪ/8ನೇ ಪ್ರತಿವಾದಿ ನಮ್ಮ ಅಣ್ಣ-ತಮ್ಮಕಿ ಅಲ್ಲ, ಆದರೆ ಅಳಿಯ ಇರುತ್ತಾನೆ. ಸರ್ವೆ ನಂ.337ರ ಜಮೀನನ್ನು ನನ್ನ ದೊಡ್ಡಪ್ಪನಾದ ಸಿದ್ದಣ್ಣ ರವರು ನಾನು 2 ವರ್ಷದವನು ಇರುವಾಗಲೇ ನನ್ನ ಹೆಸರಿನಲ್ಲಿ ಖರೀದಿಸಿರುತ್ತಾರೆ. ನಮ್ಮ ಹಿರಿಯರಿಂದ ಬಂದ ಜಮೀನುಗಳಲ್ಲಿ 8ನೇ ಪ್ರತಿವಾದಿಗೆ ಯಾವುದೇ ಹಿಸ್ಸೆ ಇಲ್ಲ ಎಂದರೆ ಸರಿ. ಆದರೆ ಸರ್ವೆ ನಂ.337ರಲ್ಲಿ ಇರುತ್ತದೆ ಎಂದು ನುಡಿಯುತ್ತಾರೆ. ಸಾಕ್ಷಿ ಪುನಃ ಮುಂದುವರೆದು 8ನೇ ಪ್ರತಿವಾದಿ ಸೈದಪ್ಪನಿಗೆ ಯಾವುದೇ ಪಾಲು ಇಲ್ಲ ಎಂದು ನುಡಿಯುತ್ತಾರೆ. 8ನೇ ಪ್ರ2ವಾದಿಗೆ ಐಟಂ ನಂ.11ರ ಸರ್ವೆ ನಂ.337ರ ಜಮೀನನ್ನು ದಾನದ ಮುಖಾಂತರ ಕೊಟ್ಟಿರುತ್ತಾರೋ ಅಥವಾ ಯಾವುದರ ಮುಖಾಂತರ ಕೊಟ್ಟಿರುತ್ತಾರೋ ನನಗೆ ಗೊತ್ತಿಲ್ಲ. ನನ್ನ ದೊಡ್ಡಪ್ಪ ಮಾಡಿಕೊಟ್ಟ ದಾನಪತ್ರ ದಾಖಲೆ ನನ್ನ ಹತ್ತಿರ ಇದೆಯೋ ಇಲ್ಲವೊ ಎಂಬ ಬೇಕಾದನ್ನು ನೋಡಲಬಾಗುತ್ತದೆ . ಸದರಿ ದಾನಪತ್ರದ ಮೇಲೆ ನಮ್ಮದಾಗಲಿ, ನಮ್ಮ ತಂದೆ-ತಾಯಿಯದು ಆಗಲಿ, ಅಣ್ಣ-ತಮ್ಮಂದಿರು ಆಗಲಿ ಯಾವುದೇ ಸಹಿ ಇರುವುದಿಲ್ಲ.

ಐಟಂ ನಂ.11ರ ಜಮೀನುದಲ್ಲಿ ವಾದಿಗೆ ಪಾಲು ಕೊಡಬಾರದು ಎಂಬ ಉದ್ದೇಶದಿಂದ ಅದನ್ನು ದಾನ ಮಾಡಲಾಗಿದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಇವತ್ತಿಗೂ ಕೂಡಾ ಐಟಂ ನಂ.11ರ ಜಮೀನನ್ನು ನಾವೇ ಸಾಗುವಳಿ ಮಾಡುತ್ತಿದ್ದೇವೆ ಎಂದರೆ ಸರಿಯಲ್ಲ. ಇವತ್ತಿಗೂ ದಾವಾ ಸ್ವತ್ತುಗಳ ಆಸ್ತಿಗಳು ಶಿವಣ್ಣ ರವರ ಕುಟುಂಬದವರ ಸ್ವತ್ತುಗಳು ಆಗಿದ್ದರೂ ಸಹ, ನಾವುಗಳು ಪಹಣಿಯಲ್ಲಿ 8ನೇ ಪ್ರತಿವಾದಿಯ ಹೆಸರನ್ನು ಸುಳ್ಳಾಗಿ ಕಾಣೆಸಿರುತ್ತೇವೆ ಎಂದರೆ ಸರಿಯಲ್ಲ. ನನ್ನ ತಂದೆ ಶಿವಣ್ಣ ಇರುವವರೆಗೂ ದಾವಾ ಸ್ವತ್ತುಗಳಲ್ಲಿ ಹಂಚಿಕೆ ಮಾಡಿಲ್ಲ ಎಂದರೆ ಸರಿ. ನಮ್ಮ ತಂದೆ

ಯಾರಿಗೂ ದಾನಪತ್ರ ಮಾಡಿರುವುದಿಲ್ಲ ಎಂದರೆ, ಸಾಕ್ಷಿ ನನ್ನ ದೊಡ್ಡಪ್ಪ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ನನ್ನ ತಂದೆ ಸರಿಹೋದ ನಂತರ ನಾವೆಲ್ಲ ಅಣ್ಣ-ತಮ್ಮಂದಿರು ಇವತ್ತಿನವರೆಗೂ ಹಂಚಿಕೆ ಮಾಡಿಕೊಂಡಿರುವುದಿಲ್ಲ ಎಂದರೆ ಸರಿ. ದಾವಾ ಸ್ವತ್ತುಗಳೆಲ್ಲವು ಫಲವತ್ತತಾದ ಜಮೀನುಗಳು ಇರುತ್ತವೆ ಮತ್ತು ಅವುಗಳ ಪೈಕಿ 15 ಎಕರೆ ಜಮೀನು ನೀರಾವರಿ ಜಮೀನು ಇದೆ ಎಂದರೆ ಸರಿ. ಸದರಿ ನೀರಾವರಿ ಜಮೀನುಗಳಲ್ಲಿ ಕಬ್ಬು ಬೆಳೆಯುತ್ತೇವೆ ಹಾಗೂ ಕಾರ್ಖಾನೆಗೆ ಕಳುಹಿಸುತ್ತೇವೆ ಎಂದರೆ ಸರಿ.

ವಾದಿ ಶಿವಲಿಂಗಪ್ಪ ಕಲಬುರಗಿಯಲ್ಲಿ ಸರ್ಕಾರಿ ನೌಕರಿ ಹೊಂದಿದ್ದು, ಈಗ ಮೊನ್ನೆ ತಾನೆ ನಿವೃತ್ತಿ ಹೊಂದಿರುತ್ತಾರೆ ಎಂದರೆ ಸರಿ. ವಾದಿ ನಿವೃತ್ತಿ ಆದ ಕಾಲಕ್ಕೆ ಆತನಿಗೆ ರೂ.1,28,000/- ಸಂಭಳ ಇತ್ತು ಎಂದರೆ ನನಗೆ ಗೊತ್ತಿಲ್ಲ. ವಾದಿ ಹೆಂಡತಿ ಕೂಡಾ ಸರ್ಕಾರಿ ನೌಕರಿಯಲ್ಲಿ ಇರುತ್ತಾರೆ ಎಂದರೆ ಸರಿ. ಸರ್ಕಾರಿ ನೌಕರಿಯಲ್ಲಿ ಇರುವುದರಿಂದ ವಾದಿ ಎಸ್.ಬಿ.ಐ. ಬ್ಯಾಂಕ್‌ನಿಂದ ಸಾಲ ಮಾಡಿ ಪ್ಲಾಟ್‌ಗಳನ್ನು ಖರೀದಿ ಮಾಡಿ, ಮನೆ ಕಟ್ಟಿಸಿ ಅದರಲ್ಲಿ ಇವತ್ತಿಗೂ ಇರುತ್ತಿದ್ದಾರೆ ಎಂದರೆ ಸರಿ. 6ನೇ ಪ್ರತಿವಾದಿ ಏಕತ್ರ ಕುಟುಂಬದ ಸದಸ್ಯ ಇರುತ್ತಾನೆ ಎಂದರೆ ಸರಿ. 6ನೇ ಪ್ರತಿವಾದಿ ನಮ್ಮ ಕುಟುಂಬದಲ್ಲಿ ಇರುವಾಗಲೇ ಮರಣ ಹೊಂದಿರುತ್ತಾನೆ ಎಂದರೆ ಸರಿಯಲ್ಲ. 6ನೇ ಪ್ರತಿವಾದಿ ದತ್ತಕ ಹೋಗಿತ್ತಾನೆ ಎಂದು ನಾನು ಹೇಳಿದ್ದು, ಆ ಬಗ್ಗೆ ಕಾಗದ ಪತ್ರಗಳು ಇರುತ್ತವೇಯೇ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ಅವುಗಳನ್ನು ಹುಡುಕಾಡಬೇಕಾಗುತ್ತದೆ ಎಂದು ನುಡಿಯುತ್ತಾರೆ. ನಾಗಪ್ಪ ಯಾವತ್ತೂ ದತ್ತಕಕ್ಕೆ ಹೋಗಿಲ್ಲ ಎಂದರೆ ಸರಿಯಲ್ಲ. ಯಾವ ವರ್ಷದಲ್ಲಿ ದತ್ತಕ್ಕೆ ಹೋಗಿರುತ್ತಾನೆ ಎಂದು ನನಗೆ ಗೊತ್ತಿಲ್ಲ.

6ನೇ ಪ್ರತಿವಾದಿಯ ಆಧಾರ ಗುರುತಿನ ಚೀಟಿ ಮತ್ತು ಮತದಾರರ ಗುರುತಿನ ಚೀಟಿ ಹಾಗೂ ಪಹಣಿಗಳಲ್ಲಿ ಹಾಗೂ ಶಾಲಾ ದಾಖಲೆಗಳಲ್ಲಿ ಆತನ ತಂದೆ ಹೆಸರು ಶಿವಣ್ಣ ಅಂತ ಇದೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಹಿಂದೆ ಇತ್ತು ಈಗ ಬದಲಾವಣೆಯಾಗಿದೆ ಎಂದು ನುಡಿಯುತ್ತಾರೆ. 6ನೇ ಪ್ರತಿವಾದಿ ತಾನು ಸಾಯುವವರೆಗೂ ತನ್ನ ತಂದೆ ಶಿವಣ್ಣ ಹೆಸರಿನಲ್ಲಿ ಕರೆಯುತ್ತಿದ್ದ ಎಂದರೆ ಸರಿಯಲ್ಲ.

ಮೃತ್ಯ ಪತ್ರದಲ್ಲಿ ಕೂಡಾ 6ನೇ ಪ್ರತಿವಾದಿ ತಂದೆ ಹೆಸರು ಶಿವಣ್ಣ ಎಂದು ಬರೆದಿದೆ ಎಂದರೆ ಸರಿಯಲ್ಲ. 1968 ರಿಂದ 2007-08 ರವರೆಗೂ ಸರ್ವೆ ನಂ.68ರ ಜಮೀನು ನನ್ನ ಕಾಕ ಶರಣಪ್ಪ ರವರ ಹೆಸರಿನಲ್ಲಿ ಇತ್ತು ಎಂದರೆ ಸರಿ. ಶರಣಪ್ಪ ಮತ್ತು ಶಿವಣ್ಣ ತಾವು ಸಾಯುವವರೆಗೂ ಕೂಡಿಯೇ ಇದ್ದರು ಎಂದರೆ ಸರಿ. ಮೊದಲು ಶರಣಪ್ಪ ತಿರಿಕೊಂಡಿರುತ್ತಾರೆ, ನಂತರ ನನ್ನ ತಂದೆ ಶಿವಣ್ಣ ತಿರಿಕೊಂಡಿರುತ್ತಾರೆ. ಶರಣಪ್ಪ ತಿರಿಕೊಂಡ ನಂತರ ಆತನ ಹೆಸರಿನಲ್ಲಿರುವ ಆಸ್ತಿಗಳು ನನ್ನ ತಂದೆ ಶಿವಣ್ಣ ಮತ್ತು ಅವರ ಮಕ್ಕಳಿಗೆ ವಾರಸಾ ಮುಖಾಂತರ ಬಂದಿರುತ್ತವೆ ಎಂದರೆ ಸರಿಯಲ್ಲ.

6ನೇ ಪ್ರತಿವಾದಿಗೆ ಮೂರು ಮಕ್ಕಳು ಇರುತ್ತಾರೆ ಅವರೆಂದರೆ, ಶರಣಪ್ಪ, ಸ್ವಪ್ನ ಮತ್ತು ಕಾವ್ಯ ಇರುತ್ತಾರೆ. 3ನೇ ಪ್ರತಿವಾದಿ ನನ್ನ ಮಗಳು ಇರುತ್ತಾಳೆ, ಅವಳ ಹೆಸರಿನಲ್ಲಿ 6ನೇ ಪ್ರತಿವಾದಿ ಸರ್ವೆ ನಂ.68ರ ಜಮೀನನ್ನು ಗೀಫ್ಟ್ ಮಾಡಿರುತ್ತಾನೆ. ಗೀಫ್ಟ್ ಡಿಡ್ ಇದ್ದಿರುಬಹುದು, ಅದನ್ನು ನೋಡಬೇಕಾಗುತ್ತದೆ. ನಾವಪ್ಪನ ಹೆಸರಿನಲ್ಲಿರುವ ಜಮೀನನ್ನು ನಾನು ನನ್ನ ಮಗಳಾದ 3ನೇ ಪ್ರತಿವಾದಿಯ ಹೆಸರಿನಲ್ಲಿ ಮ್ಯೂಟೆಷನ್ ಮಾಡಿಸಿದ್ದು ಹಾಗೂ ನಾನು ಹೇಳುವ ಪ್ರಕಾರ ನಾಗಪ್ಪ ಯಾವತ್ತು ಗೀಫ್ಟ್ ಡಿಡ್ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. 6ನೇ ಪ್ರತಿವಾದಿ ನಾಗಪ್ಪನಿಗೆ ಮಕ್ಕಳು ಇದ್ದರೂ ಕೂಡಾ, ನಿಮ್ಮ ಮಗಳ ಹೆಸರಿನಲ್ಲಿ ಏಕೆ ಮಾಡಿರುತ್ತಾರೆ ಎಂದರೆ, ಸಾಕ್ಷಿ ಆತ ತನ್ನ ಮಕ್ಕಳು ಹುಟ್ಟುವಕ್ಕಿಂತ ಮುಂಚೆನೆ ನನ್ನ ಮಗಳಿಗೆ ಮಾಡಿರುತ್ತಾನೆ ಎಂದು ನುಡಿಯುತ್ತಾರೆ. ವಾದಿಗೆ ಸರ್ವೆ ನಂ.68ರಲ್ಲಿ ಯಾವುದೇ ಹಿಸ್ಸೆ ಕೊಡಬಾರದು ಎಂಬ ಉದ್ದೇಶದಿಂದ 6ನೇ ಪ್ರತಿವಾದಿಯ ಜಮೀನನ್ನು ನನ್ನ ಮಗಳ ಹೆಸರಿನಲ್ಲಿ ನಾನೇ ಮ್ಯೂಟೇಷನ್ ಮಾಡಿಸಿರುತ್ತೇನೆ ಎಂದರೆ ಸರಿಯಲ್ಲ.

6ನೇ ಪ್ರತಿವಾದಿ ಈ ಪ್ರಕರಣದಲ್ಲಿ ತನ್ನ ವಕೀಲರ ಮುಖಾಂತರ ಹಾಜರಾಗಿದ್ದು, ಆತನ ವಕಾಲತ್‌ನಲ್ಲಿ ನಾಗಣ್ಣ ತಂದೆ ಶಿವಣ್ಣ ಕಲಶೆಟ್ಟಿ ಎಂದು ಬರೆಯಾಲಗಿದೆ ಎಂದರೆ ಸರಿ.ಅದೇ ರೀತಿ ವಕಾಲತ್ ಮೇಲಿರುವ 6ನೇ ಪ್ರತಿವಾದಿಯ ಸಹಿಯನ್ನು ನೋಡಿ ಗುರುತಿಸಿರುತ್ತಾರೆ. 6ನೇ

ಪ್ರತಿವಾದಿಯ ಮಕ್ಕಳಿಗೆ ದಾವಾ ಸ್ವತ್ತಿನಲ್ಲಿ ಸಮನಾದ ಪಾಲು ಕೊಡಲು ನಾವುಗಳು ತಯಾರು ಇರುತ್ತೇವೆ. 6ನೇ ಪ್ರತಿವಾದಿ ಯಾವತ್ತು ದತ್ತಕ್ಕೆ ಹೋಗಿಲ್ಲ ಹಾಗೂ ನನ್ನ ಮಗಳಿಗೆ ಆತ ಯಾವತ್ತು ಗೀಫ್ಟ್ ಡಿಡ್ ಮಾಡಿಕೊಟ್ಟಿಲ್ಲ ಎಂದರೆ ಸರಿಯಲ್ಲ. 6ನೇ ಪ್ರತಿವಾದಿಯ ದತ್ತಕ ಪತ್ರ ಮತ್ತು ಆಧಾರ ಕಾರ್ಡ್‌ಗಳನ್ನು ಮುಂದಿನ ದಿನಾಂಕದಂದು ತರುತ್ತೀರಾ ಎಂದರೆ, ಸಾಕ್ಷಿ ತರುತ್ತೇನೆ ಎಂದು ಹೇಳಿದ್ದರಿಂದ ಮುಂದುವರೆದ ಪಾಟೀ ಸವಾಲಿಗೆ ಸಮಯ ನೀಡಿಲಾಯಿತು.

(ಈ ಹಂತದಲ್ಲಿ ವಾದಿ ಪರ ವಕೀಲರು ಮುಂದುವರೆದ ಪಾಟೀ ಸವಾಲು ಮಾಡಲು ಸಮಯ ಕೋರಿದ್ದು, ಸಮಯ ನೀಡಿ ಮುಂದೂಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ

**ಹಿರಿಯ ಸಿವಿಲ್ ನ್ಯಾಯಾಧೀಶರು,**
**ಆಳಂದ.**